**ಒ ಎಸ್ .ಸಂಖ್ಯೆಃ 365/2023**

**ಪಿ ಡಬ್ಲ್ಯೂಃ1**

**ದಿನಾಂಕಃ 10.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎ ಹೆಚ್ ಪಿ ಅವರಿಂದಃ</u>**

1. ದಾವೆಯನ್ನು ನಾನು ಮಾಡಿರುತ್ತೇನೆ. ನನ್ನ ಮಗ, ಸೊಸೆ ಬೇರೆ ಆಗುತ್ತಿದ್ದ ಸಂಬಂಧ ಮಾಡಿರುತ್ತೇನೆ. ನನಗೆ ಸಿದ್ದಪ್ಪ ಮತ್ತು ಶ್ರೀದೇವಿ ಎಂಬ ಇಬ್ಬರೂ ಮಕ್ಕಳು ಇದ್ದಾರೆ. ನಾನು ಮತ್ತು ಸಿದ್ದಪ್ಪ ಸೊಸೆಯ ಸಲುವಾಗಿ 1-2 ವರ್ಷದಿಂದ ಬ್ಯಾರೆ ಇದ್ದೇವೆ. ಬೇರೆ ಆದ ಬಗ್ಗೆ ಕಾಗದ ಮಾಡಿಲ್ಲ.
2. ದಾವಾ ಆಸ್ತಿ ಹಿರಿಯರ ಆಸ್ತಿ. ದಾವಾ ಆಸ್ತಿ ನನ್ನ ಮೈದುನ ಭವಾಣೆಪ್ಪನ ಆಸ್ತಿ. ನನ್ನ ಗಂಡ ಮತ್ತು ನನ್ನ ಮೈದುನ ನಾಗಲಿಂಗಪ್ಪನ ಮಕ್ಕಳು. ನಾಗಲಿಂಗಪ್ಪನಿಗೆ ಒಟ್ಟು 8 ಜನ ಮಕ್ಕಳು. ಅವರ ಹೆಸರು ಮಲ್ಲಪ್ಪ, ದೇವೆಂದ್ರಪ್ಪ, ಕಾಳಪ್ಪ, ವೀರುಪಾಕ್ಷಪ್ಪ, ಮಲ್ಲಪ್ಪ, ಮೌನೇಶಪ್ಪ, ಭವಾಣೆಪ್ಪ ಮತ್ತು ನರಸಪ್ಪ. ನಾಗಲಿಂಗಪ್ಪನಿಗೆ ಹೆಣ್ಣು ಮಕ್ಕಳು ಇರಲಿಲ್ಲ. ನಾಗಲಿಂಗಪ್ಪನಿಗೆ ಗೌರಮ್ಮ ಎಂಬ ಹೆಣ್ಣು ಮಗಳು ಇದ್ದಳು, ಆದರೆ ಆಕೆ ನನ್ನ ಮದುವೆ ಪೂರ್ವದಲ್ಲಿಯೇ ತೀರಿಕೊಂಡಿದ್ದಳು. ನಾಗಲಿಂಗಪ್ಪನ 8 ಜನ ಮಕ್ಕಳು ನನ್ನ ಮದುವೆ ಆದ ನಂತರ ಬೇರೆ ಆಗಿರುತ್ತಾರೆ. ಅವರು ಬೇರೆ ಆಗಿ ಅಂದಾಜು 50 ವರ್ಷ ಆಗಿರಬಹುದು.
3. ನಮ್ಮ ಹಿರಿಯರ ಆಸ್ತಿ ಸರ್ವೆ ನಂ. 43 ರಲ್ಲಿ ಇದೆ. (ಸಾಕ್ಷಿಯು ತನ್ನ ಕೈ ಮೇಲೆ ಸರ್ವೆ ನಂಬರ ಬರೆದುಕೊಂಡು ಬಂದಿದ್ದು, ಅದನ್ನು ನೋಡಿ ಹೇಳಿರುತ್ತಾರೆ). ನಾಗಲಿಂಗಪ್ಪನ 8 ಜನ ಮಕ್ಕಳಿಗೆ ತಲಾ 1 ಎಕರೆ ಜಮೀನು ಬಂದಿದ್ದು, ಭವಾಣೆಪ್ಪನಿಗೆ ಮಾತ್ರ 1 ಎಕರೆಯ ಮೇಲೆ ಸ್ವಲ್ಪ ಹೆಚ್ಚಿಗೆ ಜಮೀನು ಬಂದಿರುತ್ತದೆ. ಭವಾಣೆಪ್ಪನಿಗೆ 1 ಎಕರೆ 7 ಗುಂಟೆ ಜಮೀನು ಬಂದಿರಬಹುದು. ಅವರ 8 ಜನ ಮಕ್ಕಳು ಬೇರೆ ಆದ ನಂತರ ತಮ್ಮ ತಮ್ಮ ಜಮೀನುಗಳನ್ನು ಬೇರೆ ಆಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ನನ್ನ ಗಂಡನ ಪಾಲಿಗೆ 1 ಎಕರೆ ಜಮೀನು ಬಂದಿದೆ. ಅದರ ಸರ್ವೆ ನಂ. 43. ನನ್ನ

ಗಂಡನ ಪಾಲಿಗೆ ಬಂದ ಸರ್ವೆ ನಂಬರ ನಿಖರವಾಗಿ ಹೇಳಲು ನೆನಪಿಲ್ಲ. ನನ್ನ ಗಂಡನ ಪಾಲಿಗೆ ಬಂದ 1 ಎಕರೆ ಜಮೀನಿನಲ್ಲಿ ಉತ್ಪನ್ನ ಸರಿಯಾಗಿ ಬರಲಿಲ್ಲ ಎಂದರೆ ಸರಿ.

4. ಶ್ರೀದೇವಿಗೆ ಇನ್ನೊಂದು ಹೆಸರು ಶಿರಸಮ್ಮ ಎಂದು ಸಹ ಕರೆಯುತ್ತಾರೆ ಎಂದರೆ ಸರಿ. 2 ನೇ ವಾದಿಯ ಲಗ್ನ ಆಗಿ 17 ವರ್ಷ ಆಗಿದೆ. 2 ನೇ ವಾದಿಗೆ ಸುಮಾರು 35 ವರ್ಷ ಇರಬಹುದು. 1 ಎಕರೆ ಜಮೀನಿನಲ್ಲಿ ಉತ್ಪನ್ನ ಸರಿಯಾಗಿ ಬರಲಿಲ್ಲ ಮತ್ತು ಆ ಸಮಯದಲ್ಲಿ ನನ್ನ ಮಗಳು ಲಗ್ನದ ವಯಸ್ಸಿಗೆ ಬಂದಿದ್ದಳು ಎಂದರೆ ಸರಿ. ಆ ಸಮಯದಲ್ಲಿ ನಾನು ಸದರಿ ಹೊಲ ಮಾರಿ ನನ್ನ ಮಗಳ ಮದುವೆ ಮಾಡಿದ್ದೇನೆ ಎಂದರೆ, ಸಾಕ್ಷಿಯು ಬೇರೆ ಹೊಲ ಮಾರಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ 1 ಎಕರೆ ಜಮೀನು ಬಂದಿತ್ತು. ನನ್ನ ತವರು ಮನೆಯವರು ಕೊಟ್ಟ ಬಂಗಾರ ಮಾರಿ ನಾನು 3 ಎಕರೆ ಹೊಲ ಖರೀದಿ ಹಿಡಿದಿದ್ದೆ. ಆ ಹೊಲ ಮಾರಿ ನನ್ನ ಮಗಳ ಮದುವೆ ಮಾಡಿದ್ದೇನೆ. ಹಿರಿಯರದ್ದು ಮತ್ತು ನಾನು ಖರೀದಿ ಹಿಡಿದ ಜಮೀನು ಒಟ್ಟು 4 ಎಕರೆ 2 ಗುಂಟೆ ಇತ್ತು ಎಂದರೆ ಸರಿ. ಅದರ ಸರ್ವೆ ನಂ. 50 ಹಿಸ್ಸಾ 2 ಎಂದರೆ ಸರಿ. ಎರಡು ಜಮೀನುಗಳನ್ನು ಒಬ್ಬರೇ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ರೊಕ್ಕ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

5. 4 ಎಕರೆ 2 ಗುಂಟೆ ಜಮೀನನ್ನು ಕನಕಪ್ಪ ಹುಡೇದಜಾಲಿ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನಾವು ಹಂಗೇ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂ. 50 ಹಿಸ್ಸಾ 2 ರಲ್ಲಿ 4 ಎಕರೆ 2 ಗುಂಟೆ ಜಮೀನು ಕನಕಪ್ಪನ ಹೆಸರಿನಲ್ಲಿ ಆಗಿದೆ. ಸದರಿ 4 ಎಕರೆ 2 ಗುಂಟೆ ಜಮೀನು ಮೂಲತಃ ಕನಕಪ್ಪನಿಗೆ ಸೇರಿದ್ದು, ನಾವು ಆತನ ಜೊತೆ ನ್ಯಾಯಕ್ಕೆ ಅಂಜಿ ಆತನಿಗೆ ಹೊಲ ಬಿಟ್ಟುಕೊಟ್ಟಿರುತ್ತೇವೆ. 2 ಎಕರೆ 35 ಗುಂಟೆ, 1 ಎಕರೆ 7 ಗುಂಟೆ ಒಟ್ಟು 4 ಎಕರೆ 2 ಗುಂಟೆ ಜಮೀನು ನನ್ನ ಗಂಡ ಮಲ್ಲಪ್ಪನಿಂದ ಕನಕಪ್ಪ ತಂದೆ ಭೀಮಪ್ಪ ಹುಡೇದಜಾಲಿಗೆ ಬಂದಿದೆ ಎಂದು ಮ್ಯುಟೇಶನ ಇದೆ ಎಂದರೆ ಅದು ಸುಳ್ಳು ಇದೆ ಎಂದು ನುಡಿಯುತ್ತಾರೆ. ಸದರಿ 4 ಎಕರೆ 2 ಗುಂಟೆ ಜಮೀನು ಸದರಿ ಕನಕಪ್ಪನಿಗೆ ಮಾರಿ ನಾನು ನನ್ನ ಮಗಳ ಮದುವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅವರು ನ್ಯಾಯ ಮಾಡಿ ಅರ್ಧ ರೊಕ್ಕ

ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಬರೇ 50 ಸಾವಿರ ಕೊಟ್ಟಿರುತ್ತಾರೆ. ಅದೇ 50 ಸಾವಿರದಿಂದ 2 ನೇ ವಾದಿಯ ಮದುವೆ ಆಗಿದೆ ಎಂದರೆ ಸರಿ. ಸರ್ವೆ ನಂ. 50 ಹಿಸ್ಸಾ 2 ರಲ್ಲಿ ಇದ್ದ 4 ಎಕರೆ 2 ಗುಂಟೆ ಜಮೀನು ಬಿಟ್ಟರೆ ನಮ್ಮ ಕುಟುಂಬಕ್ಕೆ ಯಾವುದೇ ಹಿರಿಯರ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ಹಿರಿಯರ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ.

6. ನನ್ನ ಗಂಡ ಮಲ್ಲಪ್ಪನಿಗೆ ಸರ್ವೆ ನಂ. 50 ರಲ್ಲಿ 1 ಎಕರೆ ಜಮೀನು ಬಂದಿತ್ತು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸದರಿ ಸರ್ವೆ ನಂಬರನಲ್ಲಿ 1 ಎಕರೆ ಜಮೀನು ಬಂದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಸರ್ವೆ ನಂ. 43 ರ ಜಮೀನು ಮತ್ತು ಇನ್ನೊಂದು ಜಮೀನು ಬಂದಿದ್ದು, ಅದರ ಸರ್ವೆ ನಂಬರ ಗೊತ್ತಿಲ್ಲ.

7. ದಾವಾ ಜಮೀನು 50 ವರ್ಷಗಳಿಂದಲೂ ಸಹ ಭವಾಣೆಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಭವಾಣೆಪ್ಪ ತನ್ನ ಮನೆತನದ ಅಡಚಣೆ ಸಂಬಂಧ ದಾವಾ ಜಮೀನನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ನಮಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಣ ಕೊಟ್ಟು ದಾವಾ ಆಸ್ತಿಯನ್ನು ಖರೀದಿಸಿದ್ದಾನೆ ಎಂದರೆ ಸರಿಯಲ್ಲ.

8. ನಾನು ಸ್ವಂತ ಮನೆಯಲ್ಲಿ ಬೇರೆ ಇದ್ದೇನೆ. ಆ ಮನೆ ನಂಬರ 114. ಮನೆ ನಂಬರ 114 ನಮ್ಮ ಹಿರಿಯರ ಆಸ್ತಿ ಎಂದು ನಮ್ಮ ವಕೀಲರಿಗೆ ಹೇಳಿ ಬರೆಸಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

9. ದಾವಾ ಆಸ್ತಿಗೂ ನಾನು ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಾನು 1 ನೇ ಪ್ರತಿವಾದಿಗೆ ಆಗಿಬರದವರ ಮಾತು ಕೇಳಿ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾದಿ ಮದುವೆ ಆದಾಗಿನಿಂದ ಗಂಡನ ಮನೆಯಲ್ಲಿ ವಾಸ ಇದ್ದಾಳೆ ಎಂದರೆ ಸರಿ. ನನ್ನ ಗಂಡನ ಪಾಲಿಗೆ ಬಂದ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ. ಜಮೀನು ಮಾರಾಟ ಮಾಡಿ 2 ನೇ ವಾದಿಯ ಲಗ್ನ ಮಾಡಿದ್ದೇವೆ ಎಂದು ನನ್ನ ವಕೀಲರಿಗೆ ಹೇಳಿಲ್ಲ. ದಾವಾ

ಜಮೀನಿಗೆ 1 ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜೆದಾರ ಇದ್ದಾನೆ ಎಂದರೆ ಸರಿಯಲ್ಲ. ಕೇಸ ಹಾಕಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವಾ ಜಮೀನಿನ ಚಕ್ಕಬಂದಿ ನೆನಪು ಇಲ್ಲ. 1 ನೇ ಪ್ರತಿವಾದಿಯ ಜಮೀನು ಕಬಳಿಸಲು ನಾನು ಮತ್ತು ನನ್ನ ಮಗಳು ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನನಗಾಗಲಿ, ನನ್ನ ಮಗಳಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**